# ಅದಲು ಬದಲು ಕಂಚಿಕದಲು

ಜಗತ್ತು ಎಷ್ಟೇ ಮುಂದುವರಿದಿದ್ದರೂ ಈ ಬಾರ್ಟರ್ ಪದ್ಧತಿಯನ್ನು ಬಿಡಲು ಸಾಧ್ಯವಾಗಿಲ್ಲ ಎಂಬುದು ಅಷ್ಟೇ ಸತ್ಯ. ದಿನನಿತ್ಯದಲ್ಲಿ ಹಲವು ರೂಪಗಳಲ್ಲಿ ನಮ್ಮ ನಡುವೆಯೇ ಇದು ಚಾಲ್ತಿಯಲ್ಲಿದೆ.

■ ಶ್ರೀರಂಜನಿ ಅಡಿಗ



ಮೊನ್ನೆ ನಟ ಪುನೀತ್ ರಾಜಕುಮಾರ್ ಅಭಿನಯದ ‘ಎರಡು ನಕ್ಷತ್ರಗಳು’ ಸಿನಿಮಾ ನೋಡುತ್ತಿದ್ದೆ. ನೋಡಲು ಒಂದೇ ತರಹವಿರುವ ಅಪ್ಪುದ್ವಯರು ತಮ್ಮತಮ್ಮ ಅಂಗಿಗಳನ್ನು ಬದಲಾಯಿಸಿಕೊಂಡು ‘ನನ್ನ ಉಡುಪು ನಿನ್ನದು, ನಿನ್ನ ಉಡುಪು ನನ್ನದು’ ಎಂದು ಹಾಡುವ ದೃಶ್ಯ ನನಗೆ ಬಲು ಇಷ್ಟ. ಅಪ್ಪುವಿನಂತೆಯೇ ಒಡಹುಟ್ಟಿದವರು, ಸೋದರ ಸಂಬಂಧಿಗಳು ಕೂಡ ಅಂಗಿಯನ್ನು ಆಗಾಗ ಅದಲು ಬದಲು ಮಾಡಿಕೊಳ್ಳುವವರಿದ್ದಾರೆ.

ಎಷ್ಟೋ ಮಂದಿ ಹೆಂಗಳೆಯರು ತಮ್ಮ ಸರ, ಬಳೆ, ಓಲೆಗಳನ್ನು ಗೆಳತಿಯರೊಂದಿಗೋ, ಕಸಿನ್ಸ್‌ಗಳೊಂದಿಗೋ ಎಕ್ಸ್‌ಚೇಂಜ್ ಮಾಡಿಕೊಂಡು ತಾವೇ ‘ಬೆಸ್ಟ್ ಬಡ್ಡೀಸ್’ ಎಂದು ಬೀಗುತ್ತಾರೆ.

ಮಕ್ಕಳು ಸಣ್ಣದಿರುವಾಗ ತಾಯಂದಿರು ಗಂಡು ಮಗುವಿಗೆ ಹೆಣ್ಣಿನ ಅಂಗಿ, ಹೆಣ್ಣಿಗೆ ಗಂಡಿನ ಅಂಗಿ ಹಾಕಿ ಚಂದ ನೋಡುತ್ತಾ ಅಭಾವವೈರಾಗ್ಯ ನೀಗಿಸಿಕೊಳ್ಳುವುದುಂಟು. ಗಂಡು ಮಗುವಿಗೆ ಚೌಲೋಪನಯನ ಆಗುವ ಹಿಂದಿನ ದಿನ ಸ್ಟುಡಿಯೊಗೆ ಹೋಗಿ ಮೊಗ್ಗಿನ ಜಡೆ ಹಾಕಿಸಿ, ಕಡ ತಂದ ಉದ್ದಲಂಗ ಹಾಕಿ ಬಿಂದಿ, ಬೈತಲೆ ಬೊಟ್ಟು ಹಾಕಿಯೋ, ಹೆಣ್ಣು ಮಕ್ಕಳಾಗಿದ್ದರೆ ಅಷ್ಟಮಿ ದಿನ ಕೃಷ್ಣನ ವೇಷ ಹಾಕಿ ಕೈಗೊಂದು ಕೊಳಲು ಕೊಟ್ಟು ಫೋಟೊ ಸೆಷನ್ ಮಾಡಿದರೆ ಏನೋ ಸಂತೋಷ.

ಶಾಲೆಗೆ ಹೋಗುವ ಮಕ್ಕಳಿರುವ ಮನೆಯಲ್ಲಿ ಶೂಗಳು, ಪುಸ್ತಕಗಳು, ಬುತ್ತಿಗಳು ಬದಲಾವಣೆ ಆಗದಿರಲಿ ಎಂದು ತಾಯಂದಿರು ಅವರ ವಸ್ತುಗಳ ಮೇಲೆ ಹೆಸರು ಬರೆದಿಟ್ಟಿದ್ದರೂ ಅದಲು ಬದಲಾಗುವುದೇನೂ ನಿಲ್ಲುವುದಿಲ್ಲ.

ಈ ಎಕ್ಸ್‌ಚೇಂಜ್ ಎನ್ನುವುದು ಇತ್ತೀಚಿನದಲ್ಲ. ಹಣದ ಬಳಕೆ ಆರಂಭವಾಗುವುದಕ್ಕೂ ಮುನ್ನ ಜನರು ದಿನನಿತ್ಯದ ವಹಿವಾಟಿಗೆ ವಿನಿಮಯ ತಂತ್ರ ಉಪಯೋಗಿಸುತ್ತಿದ್ದರು. ಟ್ರೇಡಿಂಗ್ ಕಾನ್ಸೆಪ್ಟ್